ಇಡೀ ನಗರ ಕಾಣುವಷ್ಟು ಎತ್ತರವಾಗಿರುವ ಒಂದು ಸ್ತಂಭಾಕಾರದ ಬೋದಿಗೆಯ ಮೇಲೆ ಸುಖಿ ರಾಜಕುಮಾರನ ಪ್ರತಿಮೆಯನ್ನು ನಿಲ್ಲಿಸಲಾಗಿತ್ತು. ಆತನ ಇಡೀ ದೇಹದ ತುಂಬ ಅಪ್ಪಟ ಚಿನ್ನದ ಎಲೆಗಳನ್ನು ಬೆಸೆಯಲಾಗಿತ್ತು. ಅಲ್ಲದೆ ಆತನ ಕಣ್ಣುಗಳಿಗೆ ಹೊಳೆಯುವ ಎರಡು ನೀಲಮಣಿಗಳನ್ನು ಕೂರಿಸಲಾಗಿತ್ತು. ಹಾಗೂ ಆತನ ಖಡ್ಗದ ಹಿಡಿಕೆಯ ಮೇಲೆ ಒಂದು ದೊಡ್ಡ ಮಾಣಿಕ್ಯ ಝಗಮಗಿಸುತ್ತಿತ್ತು.

ನಿಜಕ್ಕೂ ಆತ ಎಲ್ಲರಿಂದ ತುಂಬಾ ಆದರಿಸಲ್ಪಡುತ್ತಿದ್ದ. 'ಗಾಳಿದಿಕ್ಸೂಚಿಯ ಲೋಹದ ಹುಂಜಿನಾಕೃತಿಯಂತೆ ಆತ ಸುಂದರವಾಗಿದ್ದ' ಎಂದು ನಗರಸಭೆಯ ಸದಸ್ಯನೊಬ್ಬ ಹೇಳಿದ. ತನ್ನ ಕಲಾತ್ಮಕ ಅಭಿರುಚಿಯ ಪ್ರದರ್ಶನಕ್ಕಾಗಿಯೇ ಆತ ಹಾಗೆ ಹೇಳಿ, ತನ್ನ ಈ ಟಿಪ್ಪಣಿಯಿಂದ ತನಗೆ ವ್ಯಾವಹಾರಿಕ ಪ್ರಜ್ಞೆ ಇಲ್ಲ ಎಂದು ಜನರು ತಿಳಿದುಕೊಂಡಾರೆಂಬ ಆತಂಕದಿಂದ, 'ಆದರೆ ಆತನ ಈ ಪ್ರತಿಮೆ ಅಷ್ಟೇನೂ ಉಪಯುಕ್ತವಾಗಿಲ್ಲ' ಎಂಬ ಮತ್ತೊಂದು ಮಾತನ್ನೂ ಸೇರಿಸಿದ. ಹಾಗೆ ನೋಡಿದರೆ ಆತನಿಗೆ ಅಂಥ ವ್ಯಾವಹಾರಿಕ ಪ್ರಜ್ಞೆಯೇ ಇರಲಿಲ್ಲ.

'ನೀನು ಆ ಸುಖಿ ರಾಜಕುಮಾರನ ಹಾಗೆ ಏಕಿರಬಾರದು? ಆತ ಕನಸಿನಲ್ಲಿ ಕೂಡ ಏನನ್ನೂ ಬೇಡಿ ಅಳುತ್ತಿರಲಿಲ್ಲ' ಎಂದು ಸೂಕ್ಷ್ಮಮತಿ ತಾಯಿಯೋರ್ವಳು ಚಂದ್ರನನ್ನು ಬೇಡಿ ಅಳುತ್ತಿದ್ದ ತನ್ನ ಮಗನನ್ನು ಉದ್ದೇಶಿಸಿ ಹೇಳಿದಳು.

'ಈ ಜಗತ್ತಿನಲ್ಲಿ ಒಬ್ಬನಾದರೂ ಸುಖಿಯಾಗಿದ್ದಾನಲ್ಲ ಎಂಬ ನೆಮ್ಮದಿ ನನಗಿದೆ' ಎಂದು ನಿರಾಶಾವಾದಿಯೊಬ್ಬ ಆ ಪ್ರತಿಮೆಯನ್ನು ನೋಡುತ್ತ ಗೊಣಗಿದ.

ಉಜ್ವಲ ಕಡುಗೆಂಪು ಬಣ್ಣದ ಪೋಷಾಕು ಹಾಗೂ ಶ್ವೇತವರ್ಣದ ಮೇಲುಡುಪು ಧರಿಸಿ ಕ್ಯಾಥೆಡ್ರಲ್ ಚರ್ಚಿನಿಂದ ಹೊರಬರುತ್ತಲಿದ್ದ ಅನಾಥಾಶ್ರಮದ ಮಕ್ಕಳು 'ಆತ ದೇವದೂತನ ಹಾಗೆ ಕಾಣುತ್ತಾನೆ' ಎಂದು ಹೇಳಿದರು.

'ನಿಮಗೆ ಹೇಗೆ ಗೊತ್ತು? ನೀವು ದೇವದೂತನನ್ನು ನೋಡಿಯೇ ಇಲ್ಲವಲ್ಲ!' ಎಂದು ಗಣಿತ ಅಧ್ಯಾಪಕ ಅವರನ್ನು ಕೆಣಕಿದ.

'ಅದೇಕೆ? ನಾವು ಕನಸುಗಳಲ್ಲಿ ದೇವದೂತನನ್ನು ಕಂಡಿದ್ದೇವೆ' ಎಂದು ಮಕ್ಕಳು ಸಮರ್ಥಿಸಿಕೊಂಡರು. ಆದರೆ, ಆ ಗಣಿತ ಅಧ್ಯಾಪಕ ಹುಬ್ಬುಗಂಟಿಕ್ಕಿ ತೀರ ಉಪೇಕ್ಷೆಯಿಂದ ಅವರ ಮಾತನ್ನು ತಳ್ಳಿ ಹಾಕಿದ.

ಒಂದು ರಾತ್ರಿ ಒಂದು ಪುಟ್ಟ ಸ್ವಾಲೋ ಹಕ್ಕಿ ಆ ನಗರದ ಮೇಲೆ ಹಾರಿ ಬಂತು, ಆರು ವಾರಗಳಷ್ಟು ಹಿಂದೆಯೇ ಆ ಹಕ್ಕಿಯ ಗೆಳೆಯರು ದೂರದ ಇಜಿಪ್ಟ್ ದೇಶಕ್ಕೆ ಹಾರಿಹೋಗಿದ್ದರು. ಆದರೆ ಈ ಹಕ್ಕಿಗೆ ಅತ್ಯಂತ ಚೆಲುವಾದ ಒಂದು ಜೇಕುಗರಿಕೆಯ ಜೊತೆ ಪ್ರೇಮಾಂಕುರವಾಗಿದ್ದರಿಂದ ಅದು ಆ ಹಿಂಡನ್ನಗಲಿ ಹಿಂದೆ ಉಳಿದುಕೊಂಡಿತ್ತು. ವಸಂತಕಾಲ ಆರಂಭವಾಗಿ ಬಹಳ ದಿನಗಳಾಗಿರಲಿಲ್ಲ. ಒಂದು ದೊಡ್ಡ ಹಳದಿ ವರ್ಣದ ಕೀಟವನ್ನು ಹಿಡಿಯಲೆಂದು ಬೆಂಬತ್ತಿ, ನದಿಯಗುಂಟ ತೀರ ಕೆಳಗೆ ಹಾರುತ್ತಿದ್ದಾಗ ಈ ಸ್ವಾಲೋ ಹಕ್ಕಿಗೆ ನೀಳಕಾಯದ ಈ ಜೇಕುಗರಿಕೆ ಕಣ್ಣಿಗೆ ಬಿತ್ತು. ಅದರ ಚೆಲುವಿಗೆ ಮನಸೋತು, ಅದರ ಜೊತೆ ಮಾತಾಡಲೆಂದು ಈ ಸ್ವಾಲೋ ಅದರ ಬಳಿ ನಿಂತುಕೊಂಡಿತು.

'ನಾನು ನಿನ್ನನ್ನು ಪ್ರೀತಿಸಬಹುದೆ?' ಎಂದು ನೇರವಾಗಿ ಕೇಳಿಯೇ ಬಿಟ್ಟಿತು. ಜೇಕುಗರಿಕೆ ಒಪ್ಪಿಗೆ ಸೂಚಿಸುವಂತೆ ತನ್ನ ತಲೆ ಬಾಗಿಸಿತು. ಅದರ ಆ ಸಂಜ್ಞೆಯಿಂದ ಉತ್ತೇಜಿತವಾಗಿ, ಒಂದೇ ಸಮನೆ ಆ ಜೇಕುಗರಿಕೆಯ ಸುತ್ತ ಹಾರಾಡುತ್ತ, ತನ್ನ ರೆಕ್ಕೆಯಿಂದ ನೀರನ್ನು ಕಲಕುತ್ತ, ಬೆಳ್ಳಿವರ್ಣದ